ಹೇಳಿದ ಪ್ರಕಾರ ಯಾವ ದೇವರಿಗೂ ಹರಕೆಗೇಂತ ಬಿಟ್ಟಿರಲಿಲ್ಲ. ಬಿಟ್ಟಿದ್ದರೆ ಅದು ಇಷ್ಟು ದಿನ ಉಳಿಯುತ್ತಲೂ ಇರಲಿಲ್ಲ. ದಾಸಣ್ಣ ತಾನಾಗಿಯೇ ಯಾಕಾಗಿ ಹೀಗೆ ಊಹಿಸಿದನೋ ಎಂದು ನಾನು ಚಿಂತಿಸತೊಡಗಿದೆ. ಅವನ ಮಾತು, ವರ್ತನೆಗಳು ನನಗಂತೂ ಗುಮಾನಿಯ ಮೇಲೆ ಗುಮಾನಿ ಮೂಡಿಸಿದವು. ಚಿಕ್ಕಮ್ಮ ತನ್ನ ಕೆಂಪು ಕೆನ್ನೆಗಳು ತೋಯ್ದು ಹೋಗುವಷ್ಟು ಕಣ್ಣೀರು ಸುರಿಸಿದಳು.

ಇಂಥ ಸುದ್ದಿ ತಂದ ದಾಸಣ್ಣ ಒಂದು ಸುಡುಟೀ, ಎಲೆಯಡಿಕೆ, ಹೊಗೆಸೊಪ್ಪಿಗೆ ಅರ್ಹತೆ ಪಡೆದನು. ಮಾತು ಮುಂದುವರೆಸಿ "ಅಯ್ಯೋ ಅಷ್ಟೇ ಅಲ್ ಕಣ್ ಬೂವಮ್ಮ. ಇತ್ತಿತ್ತಲಾಗೆ ಕೋಳಿ ಕಳ್ರು ಹೊಸ ನಮೂನಿ ಕಂಡ್ ಹಿಡ್ಕೊಂಡಿದ್ದಾರಂತೆ. ಹ್ಯಾಟೆ ಹಿಡಿದೇಟಿಗೆ ತಣ್ಣೀರ್ ಬಟ್ಟೆ ಅದರ ಮಖಕ್ಕೆ ಸುತ್ತಿ ಬಿಡ್ತಾರಂತೆ. ಕೋಳಿಗೆ ಜ್ವರ ಬಂದಂಗಾಗಿ ಒಂದು ಹನಿನೂ ಕೂಗಾದಿಲ್ಲಂತೆ. ಕದ್ದು ಪ್ಯಾಟಿಗೋಗಿ ಮಾರಿ ದುಡ್ಡು ಮಾಡ್ಕೊಬೇಕೂಂತ ಇರೋರು ಈಗ ಹಿಂಗೆ ಮಾಡ್ತಾ ಇರೋದು. ಕದ್ದು ತಿನ್ಬೇಕು ಅನ್ನೋ ಮಿಂಡ್ರಿಮಕ್ಳು ಕುಡ್ಲಾಗೆ ಕತ್ತನ್ನೇ ಎಗರಿಸಿ ಬಿಡ್ತಾರೆ. ಅಂದ್ವಂಗೆ ಕಾಟಣ್ಣ ನಿನ್ನೆ ದಿಸ ಹೇಳ್ತಿದ್ದ. ಅವನ್ ಮನೆತಾವು ಅದ್ಯಾರೋ ಬಳ್ಳಾರಿ ಕಡೆಯಿಂದ ನೆಲಬಾವಿ ತೆಗೆಯೋನು ಬಂದಿದಾನಂತೆ. ಆ ಐನಾತಿ ನನ್ಮಗ ರಾತ್ರಿ ಮನಗಾಕೆ ಮುಂಚೆ ಒಂದು ಹಿಡಿ ಅಕ್ಕೀನ ಬಾಯಾಗೆ ಇಟ್ಕೊಂಡು ಮಲಗ್ತಾನಂತೆ. ಬೆಳಗ್ಗೆ ಎದ್ದೇಟಿಗೆ ಕೋಳಿಗಳು ಮೈಯ್ಯೋ ಜಾಗಕ್ಕೆ ಬಂದು ಆ ಬಾಯಾಗಿರೋ ಅಕ್ಕೀನ ಉಗಿತಾನಂತೆ. ಆ ಅಕ್ಕಿ ತಿಂದೇಟಿಗೆ ಕೋಳಿ ಸಬ್ದಾನೆ ಮಾಡ್ದೆ ತಲೆತಿರುಗಿ ಲಟಾರಂತ ಬಿದ್ದೋಗ್ತಾವಂತೆ. ಮನುಷನ್ನ ಬಾಯಾಗೆ ಅದ್ಯಾವ್ದಾಡಿ ಯಿಷ ಇದ್ದೀತು ನೀನೆ ಲೆಕ್ಕ ಹಾಕು" ಎಂದು ಕೋಳಿ ಕಳ್ಳತನದ ತಂತ್ರ, ಉಪತಂತ್ರಗಳನ್ನೆಲ್ಲಾ ಒಪ್ಪಿಸಿದನು.

ಇಷ್ಟೆಲ್ಲಾ ಚೊಕ್ಕವಾಗಿ ಹೇಳುವ ಇವನೇ ಯಾಕೆ ಹುಂಜವ ಮಟಾಶ್ ಮಾಡಿರಬಾರದೆಂಬ ಸಂಗತಿ ಮತ್ತೆ ಚಿಕ್ಕಮ್ಮನ ಎದೆಯೊಳಗೆ ಮೂಡಿತು. ಇರಲಿಕ್ಕಿಲ್ಲ ಎಂಬ ಸಮಾಧಾನವೂ ಗೋಣಗಾಡಿತು. ಎಲ್ಲಾದರೂ ತನ್ನ ಮಗ ಬದುಕಿದ್ದರೂ ಬದುಕಿರಬಹುದೆಂಬ ಒಳಗಿನ ಆಸೆಯೂ ಚಿಕ್ಕಮ್ಮನಲ್ಲಿ ಬತ್ತಿ ಹೋಗಿ ಮತ್ತಷ್ಟು ಉಳಿದಿದ್ದ ಕಣ್ಣೀರ ಸದ್ದಿಲ್ಲದೆ ಚೆಲ್ಲಿದಳು. ಕೊನೆಗೊಮ್ಮೆ ನಿಡಿದಾದ ಉಸಿರೆಳೆದುಕೊಂಡು "ನನ್ಮಗನ್ ತಿಂದ ಹಾದರಗಿತ್ತಿ ಮಗ ಸುಖವಾಗಿರ್ತಾನ ದಾಸಣ್ಣ. ನನ್ ಎದುರಿಗೇ ರಕ್ತಕಾರಿ ಸಾಯ್ಬೇಕು ಅಂತ ಹರಕೆ ಹೊತ್ಕೊಂಡಿದ್ದೀನಿ" ಎಂದು ಹಿಡಿಶಾಪ ಕುಕ್ಕಿ ಎದ್ದು ನಿಂತಳು.

ನಮ್ಮ ಮನೆಯ ಕುಕ್ಕಟ ಸಂತತಿಯನ್ನು ಉನ್ನತಿಗೊಳಿಸಿದ ಆ ಕೆಂಪು ಹುಂಜ ಇವತ್ತಿಗೂ ನನ್ನ ನೆನಪಿನಲ್ಲಿದೆ. ನಮ್ಮ ಮನೆಯನ್ನು ಕಷ್ಟಕಾಲದಲ್ಲಿ ತನ್ನ ಸಂತತಿ ಹೆಚ್ಚಿಸುವ ಶಕ್ತಿಯಿಂದ ಕಾಪಾಡಿದ ಆ ಹುಂಜಜ್ಜನಿಗೆ ಶರಣು ಎನ್ನದೆ ಇರಲು ಸಾಧ್ಯವೇ?

## ಕಲೀಮ್ ಉಲ್ಲಾ

ಚಿಕ್ಕಮಗಳೂರು ಜಿಲ್ಲೆಯ ತರೀಕೆರೆಯವರಾದ ಕಲೀಮ್ ಕತೆ, ಪ್ರಬಂಧ, ಅಂಕಣ ಬರಹಗಳನ್ನು ಬರೆದುಕೊಂಡು ಬಂದಿದ್ದಾರೆ. 'ಪ್ರಜಾವಾಣಿ' ದಿನಪತ್ರಿಕೆಯ 'ಕಾಮನಬಿಲ್ಲು' ಪುರವಣಿಯಲ್ಲಿ ಈ ಹಿಂದೆ ಪ್ರಕಟವಾದ ಅವರ 'ಕ್ಲಾಸ್‌ಟೀಚರ್' ಎಂಬ ಅಂಕಣ ಅವರಿಗೆ ಜನಪ್ರಿಯತೆಯ ಜೊತೆಗೆ ಅಪಾರ ಓದುಗರನ್ನು ದೊರಕಿಸಿಕೊಟ್ಟಿತು. ಈ ಅಂಕಣ ಅದೇ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ಪ್ರಸ್ತುತ ಅವರು ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರಾಗಿ ಕೆಲಸ ಮಾಡುತ್ತಿದ್ದಾರೆ.